ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ).—ಪಬ್ಲಿಕ್‌ವರ್ಕ್ಸ್ ಇಲಾಖೆಯ ಕೆಲವು ಕೆಲಸಗಳಲ್ಲಿ ಕೆಲವನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ವರ್ಗಮಾಡಿಲ್ಲವೆ ?

Sri Kadidal MANJAPPA.—That does not arise out of this question.

Promotion of maistries as Sub-overseers in the P. W. D.

Q.—458. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of Sub-Overseers in Public Works Department who have been promoted from the rank of maistries and who have not passed any Mechanical and Electrical Engineering tests and who do not possess any educational qualifications ;

(*b*) whether they have been authorised to record entries in the Measurement Books ;

(*c*) whether these persons possess any knowledge of Civil Engineering ?

A.—**Sri Kadidal MANJAPPA** (Minister for Revenue and Public Works).—

(*a*) Sub-Overseers are appointed by direct recruitment and not promoted from the rank of maistries.

(*b*) and (*c*) Do not arise in view of reply to (*a*) above.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಪರೀಕ್ಷೆ ಪಾಸುಮಾಡಿರುವವರೇ ಇದ್ದಾರೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇವರಲ್ಲಿ 'ಸುಕ್ಕೂರ್' ಪರೀಕ್ಷೆ ಮಾಡಿರುವವರೂ ಇದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.— ಸುಕ್ಕೂರ್ ಪರೀಕ್ಷೆ ಎಂದರೇನು ? ಕನ್ನಡಕ್ಕೆ ತರ್ಜುಮೆಯಾದ ಉತ್ತರದಲ್ಲಿ ಮುದ್ರಣದ ತಪ್ಪಿರಬಹುದು. ಮೇಸ್ತ್ರಿಗಳಿಗೆ ಸಬ್ ಓವರ್‌ಸಿಯರ್ ಆಗಿ ಪ್ರಮೋಷನ್ ಕೊಡುವುದಿಲ್ಲ. ಅವರಿಗೆ ಅರ್ಹತೆಯಿದ್ದರೆ ವರ್ಕ್ಸ್ ಇನ್‌ಸ್ಪೆಕ್ಟರುಗಳಾಗಿ ನೇಮಿಸುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಬೆಂಗಳೂರಿನಲ್ಲೋ ತಮ್ಮೂರಿನಲ್ಲೋ ಮನೆಯಲ್ಲೇ ಇದ್ದುಕೊಂಡು ಪೋಸ್ಟಿನ ಮೂಲಕ ಪರೀಕ್ಷೆ ಮಾಡಿರುವವರು, ಎಂದರೆ, ಸುಕ್ಕೂರ್ ಪರೀಕ್ಷೆ ಮಾಡಿರುವವರಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.— ಸುಕ್ಕೂರ್ ಪರೀಕ್ಷೆ ಎಂದರೆ ನನಗೆ ಅರ್ಥವಾಗಿಲ್ಲ. ಬೆಂಗಳೂರಿನ ಇಂಜಿನಿಯರಿಂಗ್ ಸ್ಕೂಲಿನಲ್ಲಿ ಮೂರುವರ್ಷ ಶಿಕ್ಷಣ ಪಡೆದು ಆ ಮೇಲೆ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಅಂಥವರನ್ನು ನೇಮಿಸುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಶಿಕ್ಷಣ ಪಡೆಯುವುದು ಅಲ್ಲೊ ; ಇಲ್ಲೊ ?

ಶ್ರೀ ಕಡಿದಾಳ್ ಮಂಜಪ್ಪನವರು.— ಇಂಜಿನಿಯರಿಂಗ್ ಸ್ಕೂಲಿನಲ್ಲಿ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ತಮ್ಮ ತಮ್ಮ ಊರಿನಲ್ಲಿ ಕುಳಿತುಕೊಂಡು ಕಾಗದದ ಮುಖೇನ ಪರೀಕ್ಷೆ ಪಾಸು ಮಾಡಿದವರಿಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.—ಊರಿನಲ್ಲಿ ಕುಳಿತು ಓದಿದವರನ್ನು ನೇಮಿಸುವ ಹಾಗಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅಂಥವರು ಸಬ್ ಓವರ್‌ಸಿಯರಾಗಿ ಈ ಇಲಾಖೆಯಲ್ಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಕಡೂರು ಚಿಕ್ಕಮಗಳೂರಿನಲ್ಲಿ ಇಂಥವರಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ವರ್ಕ್ ಇನ್‌ಸ್ಪೆಕ್ಟರಾಗಿರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅವರು ಸರಿಯಾಗಿ ಅಳತೆ ಮಾಡುವುದಿಲ್ಲ, ಪುಸ್ತಕದಲ್ಲಿ ನಮೂದುಮಾಡುವುದಿಲ್ಲವೆಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರು ಲೆಕ್ಕ ಇಡಬೇಕಾಗಿಯೂ ಇಲ್ಲ, ಅಳತೆಯನ್ನೂ ಮಾಡಬೇಕಾಗಿಲ್ಲ.

ಶ್ರೀ ವೈ. ಎಂ ಚಂದ್ರಶೇಖರಯ್ಯನವರು.—ನಮ್ಮ ತಾಲ್ಲೂಕಿನಲ್ಲಿ ಇಬ್ಬರು ಇದ್ದಾರೆ, ಅವರು ಎಲ್ಲವನ್ನೂ ಮಾಡುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರನ್ನು ಸಬ್ ಓವರ್‌ಸಿಯರಾಗಿ ನೇಮಕ ಮಾಡಿಕೊಂಡಿರಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಇವರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.— ಬಂದಿದ್ದರೆ ಇದುವರೆಗೆ ಅವರನ್ನು ಕೆಲಸದಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಈಗ ಅಲ್ಲಿ ಎರಡು ಡಿವಿಜ಼ನ್‌ಗಳಿಗೆ ಕೆಲಸ ಜಾಸ್ತಿ ಇಲ್ಲ, ಬಹಳ ಕಡಮೆಯೆಂದು ಒಪ್ಪುತ್ತೀರಾ?

Sri Kadidal MANJAPPA—That question does not arise.

Delay in Sanctioning loans to raiyats.

Q.—483. **Sri U. M. MADAPPA** (Chamarajanagar).—

Will the Government be pleased to state.—

Whether it has not come to their notice that the raiyats are put to great inconvenience as the takkavi loans, short-term loans, long-term loans and mortgage bank loans applied for by them are not being sanctioned to them in time?

A.—**Sri Kadidal MANJAPPA** (Minister for Revenue and Public Works).—In some cases.

ಶ್ರೀ ಯು. ಎಂ. ಮಾದಪ್ಪನವರು.—ತಡವಾಗುವುದು ಕೆಲವು ಸಂದರ್ಭಗಳಲ್ಲಿ ಗಮನಕ್ಕೆ ಬಂದಿದೆ ಎಂದು ತಿಳಿಸಿದ್ದೀರಿ, ಹೀಗೆ ಗಮನಕ್ಕೆ ಬಂದಮೇರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪನವರು.—ಆದಷ್ಟು ಜಾಗ್ರತೆ ಪಾವತಿ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

ಶ್ರೀ ಯು. ಎಂ. ಮಾದಪ್ಪನವರು.—ಸಕಾಲಕ್ಕೆ ಮಂಜೂರು ಮಾಡದೇ ಇರಲು ಕಾರಣರಾರು?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಸಂದರ್ಭಗಳಲ್ಲಿ investigation ಮಾಡುವುದಕ್ಕೆ ತಡವಾಗುತ್ತದೆ, ಕೆಲವು ಸಂದರ್ಭಗಳಲ್ಲಿ valuation ಮಾಡುವುದರಲ್ಲಿ ತಡವಾಗುತ್ತದೆ, ಮತ್ತೆ ಕೆಲವು ಸಂದರ್ಭಗಳಲ್ಲಿ ಸೆಕ್ಯೂರಿಟಿ ಕೊಡುವುದರಲ್ಲಿ ತಡವಾಗುತ್ತದೆ, ಹೀಗೆ ನಾನಾ ಕಾರಣಗಳಿಂದ ತಡವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪನವರು,—ಹೆಚ್ಚು ಸಂದರ್ಭಗಳಲ್ಲಿ ತಡವಾಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೆಚ್ಚು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಯು. ಎಂ. ಮಾದಪ್ಪನವರು.—ಜಾಗ್ರತೆ ಈ ಸಹಾಯ ಸಿಕ್ಕುವಹಾಗೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಜಾಗ್ರತೆ ಕೊಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಯು. ಎಂ. ಮಾದಪ್ಪನವರು.—ಮುಂದೆ ಹಾಗೆ ಸಿಕ್ಕದೇ ಇದ್ದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

Mr. SPEAKER.—The member is repeating the question in several ways.

ಶ್ರೀ ಕಡಿದಾಳ್ ಮಂಜಪ್ಪನವರು.—ಈಗ ಸಿಕ್ಕುತ್ತಿದೆ.

ಶ್ರೀ ಯು. ಎಂ. ಮಾದಪ್ಪನವರು.—ಕೆಲವು ಸಂದರ್ಭಗಳಲ್ಲಿ ತಡವಾಗಿದೆಯೆಂದು ತಿಳಿಸಿದೆ, ಅಂಥ ಸಂದರ್ಭಗಳಲ್ಲಿ ಜಾಗ್ರತೆ ಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಗಲೇ ಹೇಳಿದ್ದೇನೆ, ಆದಷ್ಟು ಜಾಗ್ರತೆ ಆಗುವಂತೆ ಪ್ರಯತ್ನಮಾಡುತ್ತೇವೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ತಕ್ಕಾವಿ ರೇಟ್ ಕೊಡಬೇಕಾದರೆ, ಅಮಲ್ದಾರರ ಸ್ವಂತ ಜವಾಬ್ದಾರಿಯ ಮೇರೆ, ಎಂದರೆ personal responsibility ಮೇರೆ ಕೊಡಬೇಕೆ?

Sri Kadidal MANJAPPA.—To some extent he is responsible because it is Government money.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—To some extent ಎಂದರೆ ಅರ್ಥವಾಗುವುದಿಲ್ಲ; ಹೋಗಲಿ ಈ personal responsibility ಕಡಿಮೆ ಮಾಡಿದರೆ ಬೇಗ ಜನರಿಗೆ ಈ ಸಹಾಯ ಸಿಕ್ಕುತ್ತದಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಒಂದು ದೃಷ್ಟಿಯಿಂದ ಸರಿಯಾಗಿ ಕಾಣಬಹುದು; ಆದರೆ ಸರ್ಕಾರದ ಹಣದ ಭದ್ರತೆ ದೃಷ್ಟಿಯಿಂದ ಸರಿಯಲ್ಲ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ಜವಾಬು ಅಡಮಾನದ ಬ್ಯಾಂಕುಗಳಲ್ಲಿ ಸಾಲ ಸಿಕ್ಕಲು ನಿಧಾನವಾಗಲು ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—Investigation, valuation, security, ಕಾಗದ ಪತ್ರಗಳು; ಅಧಿಕಾರಿಗಳ ದೋಷದೋಷದಿಂದಲೂ ಕೆಲವು ವೇಳೆ ತಡವಾಗಬಹುದು.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ತಾವು ಈ ಕೋ ಆಪರೇಟಿವ್ ಸೊಸೈಟಿ ಇನ್‌ಸ್ಪೆಕ್ಟರುಗಳಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟ ಅರ್ಜಿಗಳನ್ನು ಸರಿಯಾದ ಕ್ರಮದಲ್ಲೇ ಬರೆಸಿ ಸಾಲಕ್ಕೆ ಹಾಕಿಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ತಮ್ಮ ಸಲಹೆಯನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು).—ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕನವರು ಸಾಲ ಕೇಳಿದ ತಕ್ಕವರಿಗೆಲ್ಲಾ ಸಾಲ ಕೊಡುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಲ ಕೇಳಿದವರಿಗೆಲ್ಲಾ ಕೊಡುವುದಕ್ಕಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅವರ ಅಗತ್ಯಕ್ಕೆ ಸಾಕಷ್ಟನ್ನಾದರೂ ಕೊಡಬಾರದೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರು ಕೇಳಿದ ತಕ್ಕ ಮೊಬಲಗಿಗೆ ಸಾಕಷ್ಟು ಜವಾಬನ್ನು ಈಡು ಮಾಡಿದರೆ (Security) ಸಾಲ ದೊರೆಯುತ್ತೆ.

ಶ್ರೀ ಎ. ವಾಸಿಯಪ್ಪನವರು (ಹಿರಿಯೂರು).—250 ರೂಪಾಯಿಗಳವರೆಗಿನ ಸಾಲವನ್ನು ಕೊಡತಕ್ಕ ಅಧಿಕಾರ ಅಮಲ್ದಾರರಿಗೂ ಮತ್ತು 500 ರೂಪಾಯಿಗಳವರೆಗಿನ ಸಾಲ ಕೊಡತಕ್ಕ ಅಧಿಕಾರ ಎಸ್. ಡಿ. ಓ. ಅವರಿಗೂ ಇರುತ್ತಡೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್

ಶ್ರೀ ಜಿ. ಬಸಪ್ಪನವರು (ಹೊನಾವರ್ಗ).—ತಾವು ಸಾಲವನ್ನು ಪ್ರಾಮಿಸರಿ ಪತ್ರಗಳ ಆಧಾರದಮೇಲೆ ಕೊಡುತ್ತೀರೋ ಅಥವಾ ಪತ್ರಗಳ ಆಧಾರದ ಮೇಲೆ ಕೊಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಸರಿಯಾದ ಡೀಡು ಪತ್ರ ಬರೆಸಿಕೊಂಡು ಕೊಡುತ್ತಾರೆ.

ಶ್ರೀ ಜಿ. ಬಸಪ್ಪನವರು.—ನಾನು ಕೇಳುತ್ತಿರುವುದು ಸಾಲವನ್ನು ಪ್ರಾಮಿಸರಿ ಪತ್ರಗಳ ಆಧಾರದಮೇರೆಯೋ ಅಥವಾ ಪತ್ರಗಳ ಆಧಾರದಮೇಲೆಯೋ ಕೊಡುತ್ತಿರುವುದು?

ಶ್ರೀ ಕಡಿದಾಳ್ ಮಂಜಪ್ಪನವರು.—ಆ ವಿವರಗಳೆಲ್ಲ ನಾನಾಗಲೇ ತಿಳಿಸಿದ್ದರಲ್ಲೇ ಬರುತ್ತವೆ.

ಶ್ರೀ ಜಿ. ಬಸಪ್ಪನವರು.—ಭೋಗ್ಯ ಪತ್ರಗಳಮೇಲೆ ಸಾಲ ಕೊಡದೆ, ಬೋಗಸ್ ಪ್ರಾಮಿಸರಿ ಪತ್ರಗಳ ಆಧಾರದ ಮೇಲೆ ಸಾಲ ಕೊಟ್ಟರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಕೆ. ಎ. ಬೈರೇಗೌಡರು (ಬೆಂಗಳೂರು ಉತ್ತರ).—ಈ ಲ್ಯಾಂಡ್ ಇಂಪ್ರೂವ್‌ಮೆಂಟಿನ ಬಗ್ಗೆ ಅಡಮಾನ ಬ್ಯಾಂಕಿನವರಿಂದ ರೈತರಿಗೇನೂ ಪ್ರಯೋಜನವಾಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀ ಕೆ. ಎ. ಬೈರೇಗೌಡರು.—ಹೀಗೆ ಈ ಅಡಮಾನದ ಬ್ಯಾಂಕಿನಿಂದ ಪ್ರಯೋಜನವಾಗದೇ ಇರುವುದ

ರಿಂದ ರೈತನ ಅನುಕೂಲಕ್ಕಾಗಿ ಸರ್ಕಾರದವರು ಮತ್ತೇನಾದರೂ ಅನುಕೂಲಗಳನ್ನು ಕಲ್ಪಿಸಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.— ಸರ್ಕಾರದವರು ತಕಾವಿ ಮತ್ತು ರ್ಯಾಂಡ್ ಇಂಪ್ರೂವೆಮೆಂಟ್ ರೋಜ್‌ಗಳನ್ನು ಕೊಡುತ್ತಾರೆ ಮತ್ತೂ ಜಪಾನು ಅಡಮಾನದ ಬ್ಯಾಂಕಿನಿಂದ ಸಾಲ ಕೊಡಿಸುತ್ತಾರೆ; ಹೀಗೆ ನಾನಾ ರೀತಿಯಲ್ಲಿ ಅನುಕೂಲಗಳನ್ನು ರೈತನಿಗೆ ಸರ್ಕಾರದವರು ಕಲ್ಪಿಸಿಕೊಟ್ಟಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡರು.— ಈ ಅಡಮಾನ ಬ್ಯಾಂಕಿಗೆ ಸಾಲಕ್ಕಾಗಿ ಹಾಕಿಕೊಂಡ ಅರ್ಜಿದಾರರಿಗೆ 6 ತಿಂಗಳು, ವರ್ಷವಾದರೂ ಹಣ ಮಂಜೂರು ಮಾಡದಿರುವ ನಿದರ್ಶನಗಳು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.— ಈ ಪ್ರಶ್ನೆಗೆ ಆಗಲೇ ಉತ್ತರ ಕೊಡಲಾಗಿದೆ. ಅಂಥ ಸಂದರ್ಭಗಳೇನಾದರೂ ಇದ್ದು ನಮ್ಮ ಗಮನಕ್ಕೆ ಬಂದರೆ we will enquire into the matter.

ಶ್ರೀ ಡಿ. ದೇವರಾಜ ಅರಸ್‌ರವರು (ಹುಣಸೂರು),— ಈ ತಕಾವಿ ಇತ್ಯಾದಿ ಸಾಲಗಳನ್ನು ಒಂದು ನಿಯಮಿತ ಕಾಲಾವಧಿಯೊಳಗೇ ಮಂಜೂರು ಮಾಡಿ ಅರ್ಜಿದಾರರಿಗೆ ಹಣ ಪ್ರಾವತಿಯಾಗುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು. - ಮಾಡುತ್ತೇವೆ.

ಶ್ರೀ ಡಿ. ದೇವರಾಜ ಅರಸಿನವರು.—ಸಾಲ ಕೇಳ ತಕ್ಷಣವೇ ಸರಿಯಾದ ಅಡವು ಕೊಟ್ಟರೆ ಅವರಿಗೆ ಸಾಲ ಸಿಕ್ಕುವಂತೆ ಅನುಕೂಲ ಮಾಡುತ್ತೀರಾ?

Sri Kadidal MANJAPPA.—We will examine that suggestion.

ಶ್ರೀ ಡಿ. ಆರ್. ಕರಿಗೌಡರು (ಹಾಸನ).— ತಾಲ್ಲೂಕು ಅಮಲ್ದಾರರು ಮತ್ತು ಎಸ್.ಡಿ.ಓ.ಗಳವರು ಅವರು ಮಂಜೂರು ಮಾಡಿದ ಸಾಲಗಳ ಕಂತನ್ನು ಅವರು ಸರಿಯಾಗಿ ವಸೂಲು ಮಾಡದಿದ್ದರೆ, ಬಾಕಿ ನಿಲ್ಲತಕ್ಕ ಪೊಬಲಗನ್ನು ಅವರ ಸಂಬಳದಲ್ಲಿ ಹಿಡಿಯಬೇಕೆಂಬ ನಿಯಮವಿರುತ್ತದೆಯೆಂದು ಹೆದರಿಕೊಂಡು ಸಾಲವನ್ನೇ ಮಂಜೂರುಮಾಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರು ಸ್ವಲ್ಪ cautious ಆಗಿ ನಡೆಯುತ್ತಿರಬಹುದು.

ಶ್ರೀ ಡಿ. ಆರ್. ಕರಿಗೌಡರು.—ಅವರ ಸಂಬಳವನ್ನು ಹಿಡಿಯುತ್ತಾರೆಂಬ ನೆಪದಿಂದ ಅವರು ಮಂಜೂರು ಮಾಡುತ್ತಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀ ಡಿ. ಆರ್. ಕರಿಗೌಡರು.—ಈ ಹಣದ ವಸೂಲಿ ಜವಾಬ್ದಾರಿಯನ್ನು ಆಯಾ ಜಿಲ್ಲೆಯ ಮಲ್ಟಿಪರ್ಪಸಸ್ ಸೊಸೈಟಿಗಳವರಿಗೆ ವಹಿಸಿದರೆ ಅನುಕೂಲವಾಗಿರುತ್ತದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗೆ ಮಲ್ಟಿಪರ್ಪಸಸ್ ಸೊಸೈಟಿಗಳವರಿಗೆ ವಹಿಸಿದರೆ ಎಲ್ಲವೂ ಸರಿಹೋಗುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೂ ತಮ್ಮ ಅಭಿಪ್ರಾಯವನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡರು.—ಹಾಗೆ ಸಾಲಕ್ಕಾಗಿ ಬರತಕ್ಕ ಅರ್ಜಿದಾರರ ಸ್ಥಿತಿಗತಿಗಳೆಲ್ಲಾ ಸ್ಥಳೀಯ ಮುಖಂಡರುಗಳಿಗೆ ಚೆನ್ನಾಗಿ ಗೊತ್ತಿರುವುದರಿಂದ ಈ ಸಾಲಗಳ ಮಂಜೂರಾತಿ ಮತ್ತು ವಸೂಲಿ ಕ್ರಮಗಳನ್ನು ಅವರಿಗೆ ವಹಿಸಿದರೆ ಇದರಿಂದ ಜನಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆಂಬುದನ್ನು ತಾವು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದರೆ ಅದು ಕಾರ್ಯರೂಪದಲ್ಲಿ ಹೇಗೆ ಆಗುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡರು.—ಸ್ಥಳೀಯ ಮುಖಂಡರು ಅಧಿಕಾರಿಗಳಿಗಿಂತಲೂ ಹೆಚ್ಚು ನಂಬಿಕೆಯುಳ್ಳವರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ತಮ್ಮ ಅಭಿಪ್ರಾಯ.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).— ಸರ್ಕಾರದವರಿಂದ ಸಾಲ ತೆಗೆದುಕೊಳ್ಳುವುದು ಉತ್ತಮವೋ ಅಥವಾ ಅಡಮಾನದ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದು ಉತ್ತಮವೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ತಮ್ಮ ಅಭಿಪ್ರಾಯಕ್ಕೇ ಬಿಟ್ಟಿರತಕ್ಕದ್ದಾಗಿದೆ. ಇದು ಪ್ರತಿಯೊಬ್ಬರ ಅಭಿರುಚಿಯ ವೆ ರೆಲೆ ಹೋಗುತ್ತದೆ.

ಶ್ರೀ ಎಂ. ಶಂಕರಲಿಂಗೇಗೌಡರು.—ಸರ್ಕಾರದಲ್ಲಿ ಸಾಲ ತೆಗೆದುಕೊಂಡರೆ ಅವರು ಎಷ್ಟೇ ತಗಾದೆ ನೋಟೀಸುಗಳನ್ನು ಕೊಟ್ಟರೂ ಹಣ ಕೊಡದೆ ತಪ್ಪಿಸಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

SHORT NOTICE QUESTION AND ANSWER.

Stoppage of relief works in famine affected areas of Kolar District.

Q.—14. Sri H. C. LINGA REDDY (Malur).—

Will the Government be pleased to state:—

(*a*) whether it is a fact that relief works have been stopped recently (from 28th June 1952) in the famine affected areas of the Kolar District;

(*b*) the reasons for stopping the relief works?

A.—Sri Kadidal MANJAPPA (Minister for Revenue and Public Works).—

(*a*) and (*b*) Instructions have been issued to continue relief works only in such places where there is absolute necessity.

Sri H. C. LINGA REDDY.—Have the Government received a number of letters and telegrams from the Kolar District that the relief works have been stopped and thereby the people have been put to a lot of hardship?